

ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಹೊರಾಂಗಣ.



“ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಬೇರೆ ಜಾತಿಯವರೂ ಬರುತ್ತಾರೆ ಎಂದು ಹಿಂದೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಮಠ ಜಾತ್ಯತೀತವಾಗಿದೆ. ನಂಬಿಕೆ ಹಾಗೂ ಭಕ್ತಿ ಇರುವ ಯಾರು ಬೇಕಾದರೂ ಬರಬಹುದು. ಮಠಕ್ಕೆ ಬರುವ ಭಕ್ತರಿಗೆ ಕಟ್ಟುಪಾಡುಗಳು ಇಲ್ಲ. ರಾಯರೇ ಎಲ್ಲರಿಗೂ ಜಗದ್ಗುರುಗಳು. ಭಕ್ತಿ ಹಾಗೂ ಶ್ರದ್ಧೆಯಿಂದ ಪೂಜಿಸುವ ಎಲ್ಲರಿಗೂ ರಾಯರ ಆಶೀರ್ವಾದ ಇದ್ದೇ ಇರುತ್ತದೆ.

**-ಸುಬುಧೇಂದ್ರ ತೀರ್ಥ ಸ್ವಾಮೀಜಿ,**
ಮಂತ್ರಾಲಯದ ರಾಯರ ಮಠದ ಪೀಠಾಧಿಪತಿಗಳು

ಶ್ರೀಮಠವು ದೇಶದಲ್ಲಿ 24 ಶಾಖೆಗಳನ್ನು ಶುರುಮಾಡಿದರೆ, ಅಮೆರಿಕದ ಚಿಕಾಗೋ, ಹ್ಯೂಸ್ಟನ್, ಅಟ್ಲಾಂಟಾ, ಲಂಡನ್ ಸೇರಿ ವಿದೇಶದಲ್ಲಿ ಒಟ್ಟು ಆರು ಶಾಖಾ ಮಠಗಳನ್ನು ಪ್ರಾರಂಭಿಸಿದೆ.

ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಅದೋನಿ, ಅನಂತಪುರ, ಅನಂತಪುರ ಜಿಲ್ಲೆಯ ಪೆನುಕೊಂಡ, ಮೆಹಬೂಬನಗರ, ಮೆಹಬೂಬನಗರ ಜಿಲ್ಲೆಯ ಗದ್ವಾಲ್, ಪರಿಮಳಗಿರಿ, ಮಧುಮಾಲಾ, ರಾಜೋಲಿ, ಚಿತ್ತೂರು, ಹೈದರಾಬಾದ್‌ನ ಬರಕತ್‌ಪುರಾ, ರಾಮನಾಥಪುರ, ಕದಿರಿ, ಕರ್ನೂಲ್, ವಾರಂಗಲ್ ಜಿಲ್ಲೆಯ ಹನುಮಕೊಂಡ ತಮಿಳುನಾಡಿನ ಪುದುಚೇರಿ, ರಾಮೇಶ್ವರ, ರಾಯಚೋಟಿ, ಮಹಾರಾಷ್ಟ್ರದ ಮುಂಬೈನ ಜೋಗೇಶ್ವರಿ, ನವಿಮುಂಬೈ ಖಾರಘರ್, ಕೊಲ್ಹಾಪುರ, ಗೋವಾದ ಮಡಗಾಂವ, ನವದೆಹಲಿಯಲ್ಲಿ ಮಠದ ಶಾಖೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

ಮಂತ್ರಾಲಯವು ಶ್ರೀರಾಮ ಸಂಚರಿಸಿ ಪಾವನಗೊಳಿಸಿದ ಪವಿತ್ರಭೂಮಿಯಾಗಿದೆ. ಮಠದಲ್ಲಿ ಮೂಲ ರಾಮದೇವರ ಪೂಜೆಯ ನಂತರವೇ ಧಾರ್ಮಿಕ ಕಾರ್ಯಗಳು ಶುಭಾರಂಭವಾಗುತ್ತವೆ. ಶ್ರೀರಾಮನ ಪೂಜೆಯೂ ಇದಕ್ಕೆ ಪ್ರೇರಣೆಯಾಗಿದೆ ಎನ್ನುವುದು ಹಲವರ ನಂಬಿಕೆಯಾಗಿದೆ.

‘ಮಠದ ಯತಿಗಳೆಲ್ಲರೂ ಶ್ರೀರಾಮನ ಭಕ್ತರೇ ಆಗಿದ್ದಾರೆ. ರಾಮಜನ್ಮಭೂಮಿ ಅಯೋಧ್ಯೆಯಲ್ಲಿಯೂ ಒಂದು ಮಠ ನಿರ್ಮಾಣ ಮಾಡಲು ಮಠದ ಆಡಳಿತ ಮಂಡಳಿ ಸಂಕಲ್ಪ ಮಾಡಿದೆ’ ಎಂದು ಮಠಾಧೀಪತಿ ಶ್ರೀ ಸುಬುಧೇಂದ್ರ ತೀರ್ಥರು ಹೇಳುತ್ತಾರೆ.

## ಮೂಲಕ್ಷೇತ್ರದಲ್ಲೂ ಅಭಿವೃದ್ಧಿ

ರಾಘವೇಂದ್ರ ಸ್ವಾಮಿಗಳ ಶಿಲಾಮಂಟಪಕ್ಕೆ ಭಕ್ತರ ನೆರವಿನಿಂದ ಸುವರ್ಣ ಲೇಪನ ಮಾಡುವ ಕಾರ್ಯ ಮುಂದುವರಿದಿದೆ. ಭಕ್ತರೇ ಭಕ್ತಿ ಸೇವೆಗೈಯುತ್ತಿದ್ದಾರೆ. ಇದು ಹೊಸದಾಗಿ ಮಠಕ್ಕೆ ಭೇಟಿ ಕೊಡುವ ಭಕ್ತರನ್ನು ಬೆರಗುಗೊಳಿಸುತ್ತದೆ.

ಮಂತ್ರಾಲಯದ ರಾಘವೇಂದ್ರ ರಾಯರ ಹಳೆಯ ವೃತ್ತವನ್ನು ತೆರವುಗೊಳಿಸಿ ಹೊಸ ಪ್ರತಿಮೆಗಳನ್ನು ಪುನರ್ ಪ್ರತಿಷ್ಠಾಪಿಸಲಾಗಿದೆ. ಗೋಪುರಕ್ಕೆ ಚಿನ್ನದ ಹೊದಿಕೆ ಹಾಕಲಾಗಿದೆ. ಮಠಕ್ಕೆ ಹೊಂದಿಕೊಂಡಿರುವ ಮಧ್ವಮಾರ್ಗದಲ್ಲಿನ ಕಾರಿಡಾರ್ ವಿಸ್ತರಣೆ ಮಾಡಲಾಗಿದೆ. ಸ್ವಚ್ಛ ಸುಂದರ ಮಂತ್ರಾಲಯಕ್ಕೆ ಒತ್ತುಕೊಡಲಾಗಿದೆ.